ಡಿಡಬ್ಲ್ಯೂ: 1 ಓ.ಎಸ್.ನಂ.243/2017

ದಿನಾಂಕ 28-09-2020 ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಎಸ್ ಒ ಪಿ ರೀತ್ಯಾ ಆದ ದೇಶದಂತೆ ವಿಚಾರಣೆ ತೆಗೆದುಕೊಳ್ಳಲಾಯಿತು.

ದಿನಾಂಕಃ 25-01-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲುಃ ವಾದಿ ಪರ ವಕೀಲರಾದ ಶ್ರೀ.ದಿಲೀಪ್ ಕುಮಾರ್ ವಕೀಲರಿಂದಃ

ಈ ದಾವಾ ಆಸ್ತಿಯಲ್ಲ ನಾಲ್ಕು ಮನೆಗಳು ಇದ್ದು ಅದರಲ್ಲಿ ಒಂದು ಮನೆಯಲ್ಲಿ ಪಾರ್ವತಮ್ಮನವರು ವಾಸ ಇದ್ದರು ಎಂದರೆ ಸರಿ. ಮೂರು ಮನೆಗಳನ್ನು ಪಾರ್ವತಮ್ಮನವರು ಲಕ್ಷ್ಮೀಪತಿ, ಮಂಗಮ್ಮ ಮತ್ತು ನಾಗಮಣಿ ಎಂಬುವವರಿಗೆ ಬಾಡಿಗೆಗೆ ಕೊಟ್ಟಿದ್ದರು ಎಂದರೆ ನಿಜ. ಪಾರ್ವತಮ್ಮನವರು ನಿಧನದ ನಂತರ ಈ ಮೂರು ಜನ ಬಾಡಿಗೆದಾರರು ವಾದಿಯನ್ನು ಬೇಟಿ ಮಾಡಿ ಮಾತನಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಾರ್ವತಮ್ಮನವರು ನಿಧನರಾದ ನಂತರ ಈ ಮೂರು ಜನ ಬಾಡಿಗೆದಾರರು ವಾದಿಯ ಬಳಿ ಬಾಡಿಗೆ ಕರಾರನ್ನು ಪ್ರಥಮ ಬಾರಿಗೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನನಗೆ ಲಕ್ಷ್ಮೀಪತಿ ಎಂಬುವವರು ಬಾಡಿಗೆ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಮಾಡಿರುವ ಪ್ರತಿವಾದ ಪತ್ರದಲ್ಲಿ ಎಲ್ಲೂ ಕೂಡ ಲಕ್ಷ್ಮೀಪತಿ ಎಂಬುವವರು ನನ್ನೊಂದಿಗೆ ಬಾಡಿಗೆ ಕರಾರು ಪತ್ರ ಮಾಡಿಕೊಂಡಿದ್ದರು ಎಂದು ಹೇಳಿಲ್ಲ ಎಂದರೆ ಸರಿ. ನಾನು ಈ ವಿಚಾರವನ್ನು ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಯಾರೂ ಕೇಳಿಲ್ಲ ಹಾಗಾಗಿ ಹೇಳಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಯಾವುದೇ ಬಾಡಿಗೆ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ ಎಂದರೆ ಸರಿ. ಲಕ್ಷ್ಮೀಪತಿಯವರು ನನ್ನೊಂದಿಗೆ ಯಾವುದೇ ಬಾಡಿಗೆ ಕರಾರನ್ನು ಮಾಡಿಕೊಂಡಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಬಾಡಿಗೆ ಪತ್ರ ಇದೆ ಕೂಡುತ್ತೇನೆ ಮೇಲೆ ಹೇಳಿದ ಮೂರು ಜನರು ವಾದಿಯೊಂದಿಗೆ ಬಾಡಿಗೆ ಕರಾರು ಮಾಡಿಕೊಂಡಿರುತ್ತಾರೆ, ಮತ್ತು ಪ್ರತೀ ತಿಂಗಳು ಬಾಡಿಗೆಯನ್ನು ವಾದಿಗೆ ಪಾವತಿ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ಬಾಡಿಗೆಯನ್ನು ಯಾರಿಗೆ ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ.

ದಿ:12-10-12, ದಿ:15-10-2012 ಮತು ದಿ:05-11-12 ರಂದು ನಾನು ಬಾಡಿಗೆದಾರರ ಮನೆ ಬಳಿ ಹೋಗಿ ಬಾಡಿಗೆ ನನಗೆ ಕೊಡಬೇಕು ಎಂದು ಬೆದರಿಸಿದ್ದೇನೆ ಎಂದರೆ ಸರಿಯಲ್ಲ. ಮತ್ತು ಈ ಮೂರು ಮನೆಗಳು ನನ್ನದೇ ಎಂಬುದಾಗಿ ಬೆದರಿಕೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆ ಖಾಲಿ ಮಾಡಲು ಯಾರ ಬಳಿಯೂ ಗಲಾಟೆ ಮಾಡಿಲ್ಲ , ಲಕ್ಷ್ಮೀಪತಿ ಎಂಬುವವರು ಮಾತ್ರ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಲಕ್ಷ್ಮೀಪತಿ ಎಂಬುವರು ಈಗಲೂ ವಾದಿಯ ಜೊತೆ ಬಾಡಿಗೆದಾರರಾಗಿ ಸಂಬಂಧ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಮೂರು ಜನರಿಗೂ ವಾದಿಯು ಪಾರ್ವತಮ್ಮನವರ ಮಗಳು ಎಂಬುದಾಗಿ ಗೊತ್ತಿರುವ ಕಾರಣ ನನ್ನೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ.

ಬಾಡಿಗೆದಾರ ಲಕ್ಷ್ಮೀಪತಿಯನ್ನು ನಾನು ಪಾರ್ವತಮ್ಮನವರು ತೀರಿಕೊಂಡ 11 ದಿನದ ನಂತರ ಬೇಟಿ ಮಾಡಿರುತ್ತೇನೆ. ನಾನು ಪಾರ್ವತಮ್ಮನವರು ಬರೆದುಕೊಟ್ಟ ವಿಲ್ ದಾಖಲಾತಿಯನ್ನು ತೋರಿಸಿ ಮಾತನಾಡಿರುತ್ತೇನೆ, ಅದಾದ ನಂತರ ನಾನು ಲಕ್ಷ್ಮೀಪತಿಯನ್ನು ಬೇಟಿ ಮಾಡಿಲ್ಲ. ಬಾಡಿಗೆ ಪತ್ರ ಆದ ನಂತರ ನಾನು ಲಕ್ಷ್ಮೀಪತಿಯನ್ನಾಗಲೀ, ನಾಗಮಣಿಯನ್ನಾಗಲೀ ಮತ್ತು ಮಂಗಮ್ಮನನ್ನಾಗಲೀ ಬೇಟಿ ಮಾಡಿಲ್ಲ. ಆದಾದ ನಂತರ ನಾನು ದಾವಾ ಸ್ವತ್ತಿಗೂ ಸಹ ಬೇಟಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಪಾರ್ವತಮ್ಮನವರು ನಿಧನರಾದ ನಂತರ ವಾದಿಯು ಆಸ್ತಿಗಳ ಖಾತೆ ವರ್ಗಾವಣೆಗಾಗಿ ಪ್ರಥಮ ಬಾರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸಾಕ್ಷಿಯು ನಾನು

ಮೊದಲು ಕೊಟ್ಟಿದ್ದೆ ಅವರು ಕೊಟ್ಟಿದ್ದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು ಖಾತೆ ಬದಲಾವಣೆಗೆ ಅರ್ಜಿ ಹಾಕಿದ್ದು ಅವರ ಹೆಸರಿಗೆ ಬದಲಾವಣೆ ಆಗಿದ್ದು ಇದುವರೆಗೂ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಕಾನೂನು ಪ್ರಕಾರ ಅರ್ಜಿ ಹಾಕಿ ಬರುವ ಹೊತ್ತಿಗೆ ಅವರು ಸುಳ್ಳು ದಾಖಲಾತಿಗಳ ಮೇಲೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ, ಆ ನಂತರ ರದ್ದುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

ವಾದಿಯು ದತ್ತು ಪತ್ರದ ಮೂಲಕ ಅರ್ಜಿ ಹಾಕಿದ್ದರು ಎಂದರೆ ಸಾಕ್ಷಿಯನಾನು ಪಾರ್ವತಮ್ಮನವರ ಮಗಳೆಂದೇ ಅರ್ಜಿ ಹಾಕಿದ್ದರು ಎಂದು ನುಡಿಯುತ್ತಾರೆ. ಅರ್ಜಿ ಹಾಕಿದ ನಂತರ ಮುನ್ಸಿಪಾಲಿಟಿಯವರು ಅಕ್ಕ ಪಕ್ಕದ ಮನೆಯವನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದು ಸತ್ಯಾಸತ್ಯತೆಯನ್ನು ನೋಡಿ ಖಾತೆ ಬದಲಾವಣೆ ಮಾಡಿದರು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಿ:19-01-2010 ರಂದು ಎನ್.ಜಿ. ಸಾಯಿಬಾಬ ಅಲಿಯಾಸ್ ಸಾಯಿನಾಥ ರವರ ಜೊತೆ ನೊಂದಣಿ ಕ್ರಯದ ಕರಾರನ್ನು ರದ್ದುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಪಾರ್ವತಮ್ಮನವರು ರದ್ದು ಪಡಿಸಿರುತ್ತಾರೆ, ಸಾಕ್ಷಿ ಮುಂದುವರಿದು 2004 ರಂದು ಶ್ರೀನಿವಾಸ್ ಎಂಬುವವರು ಅದರ ಮೇಲೆ ಸಾಲ ಮಾಡಿರುತ್ತಾರೆ 2010 ರಲ್ಲಿ ಕ್ರಯದ ಕರಾರನ್ನು ರದ್ದುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ ದಿ:19-01-10 ರ ಕ್ರಯದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರನಾಗಿದ್ದೆ ಎಂದರೆ ಸರಿ ನನ್ನ ಅಕ್ಕನವರು ನನ್ನ ಕರೆದುಕೊಂಡು ಹೋಗಿದ್ದರು. ನನ್ನ ಅಕ್ಕನ ಬಳಿ ಸಾಕಷ್ಟು ಹಣ ಇತ್ತು ಈಗಾಗಿ ಕ್ರಯದ ಕರಾರನ್ನು ರದ್ದುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಸಾಕಷ್ಟು ಹಣ ಇರಲಿಲ್ಲ 2004 ರ ಸಾಲವನ್ನು ತೀರಿಸಬೇಕಾಗಿತ್ತು, ಶ್ರೀನಿವಾಸ್ ರವರ ಆರೋಗ್ಯ ಸರಿರಲಿಲ್ಲ ತುಂಬಾ ಹಣ ಖರ್ಚಾಗಿತ್ತು, ಆದ್ದರಿಂದ ಹಣದ

ಅವಶ್ಯಕತೆ ಇತ್ತು ಈ ಕಾರಣದಿಂದ ಪುನಃ ಸಾಲ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. .

ಸಾಯಿ ನಾಥ ರವರು ಚಿಂತಾಮಣಿ ರವರು ಅವರನ್ನು ನಾನು ನೋಡಿರುತ್ತೇನೆ. ಅವರು ಪೈನಾನ್ಸ್ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2010 ರಲ್ಲಿ ಅವರಿಗೆ ಮನೆ ಬಾಡಿಗೆ ಬರುತ್ತಿತ್ತು ಮತ್ತು ಪಿಂಚಣಿ ಬರುತ್ತಿತ್ತು ಅವರು ಆರ್ಥಿಕವಾಗಿ ಚೆನ್ನಾಗಿದ್ದರು ಎಂದರೆ ಸರಿಯಲ್ಲ. ನಾನು 2010 ನೇ ಸಾಲಿನಲ್ಲಿ ವ್ಯವಹಾರದಲ್ಲಿ ನಷ್ಟ ಹೊಂದಿದ್ದೆ ಈ ಕಾರಣದಿಂದ ನಾನು ಸಾಯಿನಾಥರವರ ಬಳಿ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ನಾನು ಸಾಯಿನಾಥ ರವರಿಂದ ಪಡೆದ ಸಾಲಕ್ಕೆ ನನ್ನ ಅಕ್ಕ ಜಾಮೀನುದಾರರಾಗಿದ್ದರು ಎಂದರೆ ಸರಿಯಲ್ಲ..

ನಾನು ತೆಗೆದುಕೊಂಡ ಸಾಲಕ್ಕಾಗಿ ಪಾರ್ವತಮ್ಮನವರು ದಿ:23-01-2010 ರಂದು ಕ್ರಯದ ಕರಾರು ಪತ್ರವನ್ನು ಜಾಮೀನುದಾರರಾಗಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ತೆಗೆದುಕೊಂಡ ಸಾಲವನ್ನು ಸಾಯಿನಾಥ ರವರಿಗೆ ತೀರಿಸಿಲ್ಲ ಮತ್ತು ಈ ಕರಾರುತಪ್ರವನ್ನು ರದ್ದುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸಾಲ ತೀರಿಸಿಲ್ಲ ಮತ್ತು ಮನೆ ಮೇಲೆ ಇರುವ ಕರಾರನ್ನು ರದ್ದುಪಡಿಸಿಲ್ಲ ಎಂಬ ಬಗ್ಗೆ ನನ್ನ ಮೇಲೆ ಪಾರ್ವತಮ್ಮನವರಿಗೆ ಕೋಪ ಇತ್ತು ಎಂದರೆ ಸರಿಯಲ್ಲ. ಈ ಕಾರಣದಿಂದ ಪಾರ್ವತಮ್ಮನವರು ಯಾವಾಗಲೂ ಮನೆ ಮೇಲೆ ಇರುವ ಸಾಲವನ್ನು ತೀರಿಸಿ ಎಂಬುದಾಗಿ ನನಗೆ ಒತ್ತಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ದೂರವಾಣಿ ಸಂಖ್ಯೆ 9738874799 ಆಗಿರುತ್ತದೆ.

ನಿಡಿ-2 ರಲ್ಲಿ ನಾನು ಮೇಲೆ ಹೇಳಿದ ನನ್ನ ದೂರವಾಣಿ ಸಂಖ್ಯೆ ಇದೆ ಎಂದರೆ ಸರಿ. ನಿಡಿ-2 ರಲ್ಲಿ ನನ್ನ ಮೊಬೈಲ್ ನಂಬರ್ ಅನ್ನು ಬರೆಸಿರುತ್ತೇನೆ ಎಂರದೆ ಸರಿ. ಸಾಕ್ಷಿ ಮುಂದುವರಿದು ಅವರ ಹತ್ತಿರ ಮೊಬೈಲ್ ಇರಲಿಲ್ಲ ಹಾಗಾಗಿ ಮೊಬೈಲ್ ನಂಬರ್ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ದಿ:19-05-2012 ರಂದು ನಾನು

ಬೆಂಗಳೂರಿನಿಂದ ಎಷ್ಟು ಗಂಟೆಗೆ ಬಂದಿರಿ ಎಂದರೆ ಸಾಕ್ಷಿಯು ನಾನು ಚಿಂತಾಮಣಿಯಲ್ಲೆ ಇದ್ದೆ ಎಂದು ನುಡಿಯುತ್ತಾರೆ. ದಿ:19-05-12 ರಂದು ನಾನು ಪಾರ್ವತಮ್ಮನವರಿಗೆ ಕ್ರಯದ ಕರಾರು ಪತ್ರವನ್ನು ರದ್ದುಪಡಿಸುತ್ತೇನೆ ಎಂಬುದಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ದಿ:19-05-12 ರಂದು ಉಪ ನೊಂದಣಿ ಕಛೇರಿಗೆ 2-00 ರಿಂದ 2-30 ಗಂಟೆಗೆ ಬಂದಿರುತ್ತೇನೆ. ನಾನು ಮತ್ತು ಪಾರ್ವತಮ್ಮನವರು ಜೊತೆಯಲ್ಲೇ ಬಂದೆವು ಮತ್ತು ಕರೆದುಕೊಂಡು ಬಂದೆನು. ನಾನು ನಿಡಿ-1, 2 ಮತ್ತು ನಿಡಿ-6 ಕ್ಕೆ ಸಾಕ್ಷಿದಾರನಾಗಿರುತ್ತೇನೆ ಎಂದರೆ ಸಾಕ್ಷಿಯು ನಾನು ನಿಡಿ-6 ಕ್ಕೆ ಮಾತ್ರ ಸಾಕ್ಷಿದಾರನಾಗಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-1 ರ 3 ನೇ ಪುಟದಲ್ಲಿ ತೋರಿಸಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಿರಾ ಎಂದರೆ ಸಾಕ್ಷಿಯು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಶಾನೆಯಾಗಿ ಗುರುತಾಗಿರುತ್ತದೆ. ನಿಡಿ-2 ಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಹಾಕಿಲ್ಲ. ನಿಡಿ-2 ರ ಗುರುತಿಸುವವರ ಕಾಲಂ ನಲ್ಲಿ ನಾನು ಮತ್ತು ನಾರಾಯಣಸ್ವಾಮಿ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯ ಸಹಿಯನ್ನು ಈಗಾಗಲೇ ನಿಡಿ-2 (ಎಫ್) ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಕ್ರಯದ ಕರಾರು ರದ್ದತಿಯಾದ ನಿಡಿ-6 ಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಹಾಕಿರುತ್ತೇನೆ. ಈ ಮೂರು ದಾಖಲಾತಿಗಳು ಎಂದೇ ದಿನ ಒಂದೇ ಸಮಯದಲ್ಲಿ ಆದ ದಾಖಲಾತಿಗಳು ಎಂದರೆ ಸರಿ. ಈ ನಿಡಿ-1, 2 ಮತ್ತು ನಿಡಿ-6 ದಾಖಲಾತಿಗಳು ನೊಂದಣಿಯಾಗುವಾಗ ನಾನು ಉಪ ನೊಂದಣಿ ಕಛೇರಿಯಲ್ಲಿ ಹಾಜರಿದ್ದು, ಭಾಗಿಯಾಗಿದ್ದೆ ಎಂದರೆ ಸರಿ.

ನಿಡಿ-2 ರ ಫಲಾನುಭವಿ ನಾನೇ ಎಂದರೆ ಸರಿ. ನಿಡಿ-1, 2, ಮತ್ತು 6 ರ ಪತ್ರವು ಸಮಯ 3 ರಿಂದ 3-30 ಗಂಟೆಗೆ ಮುಕ್ತಾಯವಾಗಿರುತ್ತದೆ. ಸಾಮಾನ್ಯ ಉಪ ನೊಂದಣಿ ಕಛೇರಿ ಬಿ ಜಿ ಇತ್ತು ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿಘಿ ಉಪ ನೊಂದಣಾಧಿಕಾರಿ ಪರಿಚಯ ಇತ್ತು ಬೇಗ

ಆಯಿತು ಎಂದು ನುಡಿಯುತ್ತಾರೆ. ಮೂರು ದಾಖಲಾತಿಗಳ ಸಹಿಗಾಗಿ ಪಾರ್ವತಮ್ಮನವರಿಗೆ ಸಹಾಯ ಮಾಡಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ಸಹಾಯ ಅವಶ್ಯಕತೆ ಇರಲಿಲ್ಲ ಆರಾಮವಾಗಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ನಿಡಿ.6 ಕ್ರಯದ ಕರಾರು ಪತ್ರವನ್ನು ರದ್ದು ಮಾಡಲು ಪಾರ್ವತಮ್ಮನವರನ್ನು ಕರೆದುಕೊಂಡು ಬಂದ್ದೆ ಎಂದರೆ ಸಾಕ್ಷಿಯು ನಿಡಿ.1, 2 ಮತ್ತು 6 ಅನ್ನು ಮಾಡಲು ಅವರೇ ನನ್ನನ್ನು ಕರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ನಾನು ನಿಡಿ.6 ರ ಕ್ರಯದ ಕರಾರು ಪತ್ರ ರದ್ದತಿ ಮಾಡಲು ಕರೆದುಕೊಂಡು ಬಂದು ನಿಡಿ.1 ರ ವಿಲ್ ರದ್ದತಿ ಮಾಡಿಸಿರುತ್ತೇನೆ, ಮತ್ತು ನಿಡಿ.2 ವಿಲ್ ನನ್ನ ಪರವಾಗಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನು ಪಾರ್ವತಮ್ಮನವರು ನಂಬುತ್ತಿದ್ದರು ಎಂದರೆ ಸರಿ. ಪಾರ್ವತಮ್ಮನವರು ನನ್ನನ್ನು ನಂಬುತ್ತಿದ್ದ ಕಾರಣ ನಾನು ಪಾರ್ವತಮ್ಮನವರನ್ನು ಕ್ರಯದ ಕರಾರಿನ ರದ್ದತಿಗಾಗಿ ಕರೆದುಕೊಂಡು ಬಂದು ಪತ್ರ ತಯಾರಕರಿಂದ ನಿಡಿ.1 ಮತ್ತು 2 ಅನ್ನು ತಯಾರಿಸಿ ಪಾರ್ವತಮ್ಮನವರಿಗೆ ತಿಳಿಯದಂತೆ ನಿಡಿ.1 ಮತ್ತು 2 ಅನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಪಾರ್ವತಮ್ಮನವರಿಗೆ ನಿಡಿ.6 ರ ರದ್ದತಿ ಪತ್ರ ಮಾಡಲು ನನ್ನ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರಿಗೆ ಅವಶ್ಯಕತೆ ಇತ್ತು ಎಂದು ನುಡಿಯುತ್ತಾರೆ. ನಿಡಿ.1, 2 ಮತ್ತು 6 ಕ್ಕೆ ಮುನಿವೆಂಕಟಪ್ಪ ಎಂಬುವವರು ಸಾಕ್ಷಿದಾರಾಗಿರುತ್ತಾರೆ ಎಂದರೆ ಸರಿ. ನಿಡಿ.2 ಮತ್ತು ನಿಡಿ.6 ಕ್ಕೆ ನಾರಾಯಣಸ್ವಾಮಿ ರವರು ಸಾಕ್ಷಿದಾರರಾಗಿರುತ್ತಾರೆ ಎಂದರೆ ಸರಿ. ನಾನು ಈ ಇಬ್ಬರೂ ಸಾಕ್ಷಿದಾರರನ್ನು ಸಾಕ್ಷಿ ಹಾಕಲು ಕೇಳಿಕೊಂಡಿದ್ದೆ ಆಗಾಗಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಪಾರ್ವತಮ್ಮನವರಿಗೆ ನಿಡಿ.2 ರ ವಿಲ್ ಗೆ ಎಂದು ಹೇಳಿದ್ದರೆ ಅವರು ಬರುತ್ತಿರಲಿಲ್ಲ ಆದರೆ ನಾನು ನಿಡಿ.6 ರ ಪತ್ರ ಎಂಬುದಾಗಿ ಹೇಳಿ ಕರೆದುಕೊಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ತಕರಾರಿನಲ್ಲಿ ನಿಡಿ6 ರ ಕ್ರಯದ ಕರಾರು ಪತ್ರ ರದ್ದಿಯಾಯಿತಿ ಬಗ್ಗೆ ಎಲ್ಲೂ ಹೇಳಿಲ್ಲ ಎಂದರೆ ಸರಿ. ನಿಡಿ2 ರ ಆಸ್ತಿಯ ಷೆಡ್ಯೂಲ್ ನಲ್ಲಿ ದಕ್ಷಿಣಕ್ಕೆ ನನ್ನ ಸಹೋದರ ಎಸ್ ವೆಂಕಟೇಶ್ ರವರ ಮನೆ ಇದೆ ಎಂಬುದಾಗಿ ಹೇಳಿರುತ್ತೇನೆ ಎಂದರೆ ಸರಿ. ಎಸ್ ವೆಂಕಟೇಶ್ ರವರು ಸಹೋದರ ಅಲ್ಲ ಬಾವ ಎಂದರೆ ಸರಿ. ನಿಡಿ1 ಮತ್ತು 2 ರ ಅಸಲು ಪ್ರತಿ ನನ್ನ ಬಳಿಯೇ ಇತ್ತು ಎಂದರೆ ಸಾಕ್ಷಿಯು ಮೊದಲು ನನ್ನ ಅಕ್ಕನ ಬಳಿ ಇತ್ತು ಅವರು ನನಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಪಾರ್ವತಮ್ಮನವರಿಗೆ ಅವರ ಮನೆಯಲ್ಲಿ ಏನು ಒಡವೆಗಳು ಇತ್ತು ಎಂದು ಗೊತ್ತು. ನಿಡಿ2 ರಲ್ಲಿ ದಕ್ಷಿಣಕ್ಕೆ ಎಸ್ ವೆಂಕಟೇಶ್ ನನ್ನ ಸಹೋದರ ಎಂದು ತಪ್ಪಾಗಿದ್ದು ಇದನ್ನು ನಾನೇ ಮಾಡಿಸಿದ ಕಾರಣ ತಪ್ಪಾಗಿ ನಮೂದಾಗಿದೆ ಎಂದರೆ ಸರಿಯಲ್ಲ. ನಿಡಿ2 ರಲ್ಲಿ ಬೆಳ್ಳಿ ಮತ್ತು ಬಂಗಾರ ಎಂಬುದಾಗಿ ಇದೆ ಅ ಒಡವೆಗಳ ಪ್ರತ್ಯೇಕ ಗುರುತು ಇಲ್ಲ ಎಂದರೆ ಸರಿ. ನನ್ನ ಅಕ್ಕನ ಬಳಿ ಯಾವ ಯಾವ ಆಭರಣ ಇತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ ಈ ಕಾರಣದಿಂದ ಸಾಮಾನ್ಯವಾಗಿ ಬೆಳ್ಳಿ ಮತ್ತು ಬಂಗಾರದ ಎಂದು ಹೇಳಿಸಿರುತ್ತೇನೆ ಎಂದರೆ ಸರಿಯಲ್ಲ. ಪಾರ್ವತಮ್ಮನವರು ನಿಡಿ2 ಅನ್ನು ಬರೆಸಿದ್ದರೆ ಯಾವ ಯಾವ ಆಭರಣ ಇದೆ ಎಂದು ಬರೆಸುತ್ತಿದ್ದರು ಎಂದರೆ ಸಾಕ್ಷಿಯು ಅವರು ಬರೆಸಿಲ್ಲ ಎಂದು ನುಡಿಯುತ್ತಾರೆ.

ಪಾರ್ವತಮ್ಮನವರು ಸಹಿ ಮಾಡುವಾಗ ತುಂಬಾ ಕಷ್ಟಪಟ್ಟು ಮಾಡುತ್ತಿದ್ದರು ಎಂದರೆ ಸರಿ. ಪಾರ್ವತಮ್ಮನವರಿಗೆ ಊಟ ತಿಂಡಿ ಮತ್ತು ಬಟ್ಟೆಗೆ ಕೊರತೆ ಇರಲಲ್ಲ ಎಂದರೆ ಸರಿ. ಪಾರ್ವತಮ್ಮನವರಿಗೆ ವಾದಿಯಾಗಲೀ, ಅವರ ಬಾವ ವೆಂಕಟೇಶ್ ಆಗಲೀ ಯಾರೇ ಆಗಲೀ ನೋಡಿಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿ. ಅವರಿಗೆ ವಾಸ ಮಾಡಲು ಸ್ವಂತ ಮನೆ ಇತ್ತು ಆದ್ದರಿಂದ ಅವರಿಗೆ ಏನೂ ಕೊರತೆ ಇರಲಿಲ್ಲ ಎಂದರೆ ಸರಿ. ಪಾರ್ವತಮ್ಮನವರು ತೀರಿಕೊಳ್ಳುವ

ವೇಳೆಯಲ್ಲಿ ವೇಕಟೇಶ್, ಭಾಗ್ಯಲಕ್ಷ್ಮೀ, ವಾದಿ ರವರೊಂದಿಗೆ ಬಾಂಧವ್ಯ ಚೆನ್ನಾಗಿತ್ತು ಎಂದರೆ ಅಷ್ಟೇನು ಚೆನ್ನಾಗಿಲ್ಲ ಎಂದು ನುಡಿಯುತ್ತಾರೆ. ಮೇಲೆ ತಿಳಿಸಿದ ವೆಂಕಟೇಶ್ ಭಾಗ್ಯಲಕ್ಷ್ಮಿ ಮತ್ತು ವಾದಿಯೊಂದಿಗೆ ಪಾರ್ವತಮ್ಮನವರು ಯಾವುದೇ ವಾಜ್ಯ ಇಟ್ಟುಕೊಂಡಿರಲಿಲ್ಲ ಎಂದರೆ ಸರಿ. ಬೆಂಗಳೂರಿನಲ್ಲಿ ಇರುವ ವೆಂಕಟೇಶ್ ರವರ ಮನೆಗೆ ಪಾರ್ವತಮ್ಮನವರು ಹೋಗಿ ಬರುತ್ತಿದ್ದರು ಎಂದರೆ ಸರಿಯಲ್ಲ.

ನಿಡಿ.2 ರಲ್ಲಿ ನನ್ನ ಈ ವೃದ್ಧಾಪ್ಯ ದೆಸೆಯಲ್ಲಿ ನನ್ನ ಖಾಸಾ ಸಹೋದರ ಎಂ. ಪಾರ್ಥಸಾರಥಿ ಮತ್ತು ಕುಟುಂಬದವರು ನನಗೆ ಕಾಲಕಾಲಕ್ಕೆ ಬೇಕಾದ ತಿಂಡಿ ಬಟ್ಟೆ ವಸತಿ ಸೌಕರ್ಯ ಆಸ್ಪತ್ರೆ ವೆಚ್ಚಗಳನ್ನು ನೋಡಿಕೊಳ್ಳುತ್ತಾ ಎಂಬ ವಿಚಾರವನ್ನು ನಾನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.2 ರಲ್ಲಿ ಬರೆಸಿರುವ ವಿಚಾರ ಸುಳ್ಳು ಎಂದರೆ ಸಾಕ್ಷಿಯು ನಿಡಿ.2 ರ ವಿಚಾರ ಸತ್ಯ ಎಂದು ನುಡಿಯುತ್ತಾರೆ. ನಾನು ನಿಡಿ.1, 2 ಮತ್ತು 6 ದಾಖಲಾತಿಗಳು ಸಿ ಹೆಚ್ ವೆಂಕಟೇಶ್ ಎಂಬ ಪತ್ರ ಬರಹಗಾರರಿಗೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

2012 ರಲ್ಲಿ ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೆ ಚಿಂತಾಮಣಿಯಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸಾಕ್ಷಿಯು ನಾನು 2012 ಡಿಸೆಂಬರ್ ನಲ್ಲಿ ಬೆಂಗಳೂರಿಗೆ ವಾಸಕ್ಕೆ ಹೋದೆ ಎಂದು ನುಡಿಯುತ್ತಾರೆ. ನಾನು ನಿಡಿ.1 ಮತ್ತು 2 ರ ಮೇಲೆ ಪಾರ್ವತಮ್ಮನವರ ಸಹಿಯನ್ನು ಮೋಸ ಮೂಲಕ ಪಡೆದಿದ್ದೇನೆ ಎಂದರೆ ಸರಿಯಲ್ಲ. ದಿ:19-12-12 ಆದ ನತಂರ ನಾನು ಹೆಚ್ಚಿನ ಹಾಳೆಗಳಿಗೆ ಸಹಿ ಹಾಕಿಸಿಕೊಂಡಿರುತ್ತೇನೆ ಎಂಬುದಾಗಿ ತಿಳಿದು ಪಾರ್ವತಮ್ಮನವರು ಚಿಂತಾಮಣಿಯ ಉಪ ನೊಂದಣಿ ಕಛೇರಿಗೆ ಪರಿಶೀಲನೆಗಾಗಿ ಬೇಟಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಡಿ.2 ಅನ್ನು ಮಾಡಿಕೊಂಡಿರುವ ವಿಚಾರ ಗೊತ್ತಾಗಿ ಕೋಪ ಬಂದು ಬೇಜಾರಾಯಿತು ಎಂದರೆ ಸರಿಯಲ್ಲ. ನಾನು ಪಾರ್ವತಮ್ಮನವರು ಆಸ್ಪತ್ರೆಯಲ್ಲಿ ಇರುವವರೆಗೂ ಪಾರ್ವತಮ್ಮನವರೊಂದಿಗೆ ಮಾತನಾಡುತ್ತಿದ್ದೆನು.

ಪಾರ್ವತಮ್ಮನವರು ಸಾಯುವ 3-4 ದಿನಗಳ ಮೊದಲು ಮಾತನಾಡಿದ್ದೆ. ನನ್ನ ಜೊತೆ ಮಾತನಾಡಬೇಕಾದರೆ ಅವರಿಗೆ ಬುದ್ದಿ ಜ್ಞಾನ ಚೆನ್ನಾಗಿತ್ತು ಎಂದರೆ ಸೀರಿಯಸ್‌ಆಗಿತ್ತು ಎಂದು ನುಡಿಯುತ್ತಾರೆ.

ನಾನು ವಿಲ್‌ಅನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದು ತಿಳಿದು ವಾದಿಗೆ ಪಾರ್ವತಮ್ಮನವರು ದಿ:22-08-12 ರಂದು ವಿಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-6 ರ ಪ್ರಕಾರ ನಿಡಿ-2 ರ ವಿಲ್‌ಅನ್ನು ರದ್ದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಾದಿ ಹೆಸರಿಗೆ ಆದ ವಿಲ್‌ಅನ್ನು ಇದುವೆರೆಗೂ ನೋಡಿಲ್ಲ. ನಾನು ಪಾರ್ವತಮ್ಮನವರನ್ನು ಮತ್ತು ಶಿರೀನಿವಾಸಯ್ಯ ರವರನ್ನು ಯಾುವಾಗಲೂ ನೋಡಿಕೊಂಲಡಿಲ ಏಕೆಂದರೆ ನನಗೆ ನನ್ನನ್ನು ನೋಡಿಕೊಳ್ಳಲು ಶಕ್ತಿ ಇಲ್ಲ ಎಂದರೆ ಸಾಕ್ಷಿಯು ನಾನು ಪಾರ್ವತಮ್ಮನವರನ್ನು ನೋಡಿಕೊಂದಡಿದ್ದೇನೆ ಎಂದು ನುಡಿಯುತ್ತಾರೆ. ನನಗೆ ನನ್ನನ್ನು ನೋಡಿಕೊಳ್ಳಲು ಸಾಮರ್ಥ್ಯ ಇಲ್ಲದೆ ಇದ್ದರೂ ಸಹ ನಿಡಿ-1 ಮುತ್ತ 2 ಅನ್ನು ಸೃಷ್ಟಿಮಾಡಿಕೊಂಡು ನೋಡಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ನಿರ್ವಹಣೆಯನ್ನು ಈಗಲೂ ವಾದಿಯು ಮಾಡುತ್ತಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಯಾವಗಲೂ ಪಾರ್ವತಮ್ಮನವರ ಮತ್ತು ಶ್ರೀನಿವಾಸ್ ರವರ ಕಾರ್ಯವನ್ನು ಮಾಡಿಲ್ಲ ಅದನ್ನು ವಾದಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿ:22-08-12 ರ ವಿಲ್ ಪಾರ್ವತಮ್ಮನವರ ಕೊನೆಯ ವಿಲ್ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ವಿಲ್ ಆಗಿಲ್ಲ ಎಂದು ನುಡಿಯುತ್ತಾರೆ. ನಾನು ಖಾತೆಗೆ ಅರ್ಜಿ ಹಾಕಿದಾರ ವಾದಿಯು ಸಹ ತಕರಾರು ಹಾಕಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಶ್ರೀನಿವಾಸಯ್ಯ ಮತ್ತು ಪಾರ್ವತಮ್ಮನವರು ಯಾರನ್ನಾದರೂ ದತ್ತು ಪಡೆಯಲು ಅರ್ಹರಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಎಸ್ ವೆಂಕಟೇಶ್ ಮತ್ತು ಭಾಗ್ಯಲಕ್ಷ್ಮಿ ರವರೂ ಕೂಡ ದತ್ತು ಬೇರೆಯವರಿಗೆ ಕೊಡಲು ಅರ್ಹರಿದ್ದರು ಎಂದರೆ ಸಾಕ್ಷಿಯು ಅರ್ಹರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದತ್ತು ಕೊಡಲು ಅರ್ಹರಿದ್ದಾರೆ ಎಂದರೆ ಕಾನುನು ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಪಿ.1 ದತ್ತು ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಮಾಡಿದ ನಂತರ ನೋಡಿರುತ್ತೇನೆ, ಸಾಕ್ಷಿಯು ಮುಂದುವರಿದು ಪುನಃ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿಯವರು ಹಾಕಿದ ದಾಖಲಾತಿಗಳನ್ನು ನೋಡಿಲ್ಲ. ನಾನು ವಾದಿಯು ಹಾಜರುಮಾಡಿರುವ ದಾಖಲಾತಿಗಳನ್ನು ನೋಡದೇ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ. ದಾವಾ ಆಸ್ತಿಯನ್ನು ಈಗ ಕಾನೂನುಬದ್ದವಾಗಿ ಅನುಭವಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

(ಶ್ರೀ.ಶಿವಕುಮಾರ ಜಿ.ಜೆ)
ಪ್ರಧಾನ ಸಿ.ನ್ಯಾ ಮತ್ತು ಜೆಎಂಎಫ್ ಸಿ,
ಚಿಂತಾಮಣಿ.

Case called out, DW1 is present Sri. Dileep Kumar counsel fully cross examined. Perused the order sheet dated 12-12-2019 as per order of this court, the stage of the plaintiff side further evidence is reopen. hence the stage for further

evidence of plaintiff side is reopened. Issue summons to the witness No.1 to 8 mentioned in the list of witness filed on 13-08-2019 through hand summons. Call on 20-02-2021.

**Prl. Civil Judge & JMFC.,**
**Chinthamani**